ಯಲ್ಲಿದ್ದೇವೆ ಸುಮಾರು 6 ತಿಂಗಳುಗಳು ಕಳೆದುಹೋಗಿದೆ. ಆದರೂ ಕೂಡ ಇದುವರೆಗೂ ಯಾವ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ಇದಕ್ಕೆ ಒಂದು ರೀತಿಯಲ್ಲಿ ಪರೋಕ್ಷವಾಗಿ ಸರ್ಕಾರದವರು ಪ್ರಚೋದನೆಯನ್ನು ಕೊಡುತ್ತಿದ್ದಾರೆಂದು ನಾವು ಪರಿಗಣಿಸಬೇಕಾಗುತ್ತದೆ ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೇ, ನಾನು ಆದನ್ನು ವಿಚಾರ ಮಾಡುತ್ತೇನೆ.

ಶ್ರೀ ಗೋವಿಂದ ಪಿ ಒಡೆಯರಾಜ್ --ಸ್ವಾಮಿ, ಮಾನ್ಯ ಮಂತ್ರಿಗಳು ಒಂದೇ ಮಾತಿನಲ್ಲಿ ನಾನು ವಿಚಾರ ಮಾಡುತ್ತೇನೆಂದು ಹೇಳಿದರೆ ಹೇಗೆ ?

ಅಧ್ಯಕ್ಷರು --ಸ್ವಾಮಿ ತಾವು ಈಗ ಸರ್ಕಾರದ ಗಮನಕ್ಕೆ ವಿಷಯವನ್ನು ತಂದಿದ್ದೀರಿ ಅದನ್ನು ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎ ಲಕ್ಷ್ಮೀಸಾಗರ್.--ಸ್ವಾಮಿ, ಮಾನ್ಯ ಸದಸ್ಯರು ಹೇಳಿದರು ಅವರು ಅದನ್ನು ಸಿ. ಆರ್. ಇ. ಸೆಲ್‌ಗೆ ಕಳುಹಿಸಿಕೊಟ್ಟು ಅಲ್ಲಿ ತನಿಖೆ ಮಾಡಿ ಆ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆಂದು ಆ ಬಗ್ಗೆ ನಾನು ವಿಚಾರ ಮಾಡಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಅರ್ಥದಲ್ಲಿ ಹೇಳಿದ್ದೇನೆ. ಮಾನ್ಯ ಸದಸ್ಯರು ಏನೇನೋ ತಿಳಿದುಕೊಂಡರೆ ನಾನು ಏನು ಮಾಡಲಿ ?

ಶ್ರೀ ಸಿ. ವಿ. ಪುಡಕಲಕಟ್ಟಿ --ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳನ್ನು ಸರ್ಕಾರದವರು ಕೈಗೊಂಡು ಅರ್ಧ ಕೆಲಸವನ್ನು ಮಾಡಿ ಇನ್ನು ಅರ್ಧ ಕೆಲಸವನ್ನು ಹಾಗೆಯೇ ಉಳಿಸಿದ್ದಾರೆ. ಇದರಿಂದ ಸುಮಾರು 10-15 ಸಾವಿರ ಜನತೆಗೆ ಕುಡಿಯುವ ನೀರಿನ ತೊಂದರೆಯಾಗಿದೆ. ಆದ್ದರಿಂದ, ಮಾನ್ಯ ಮಂತ್ರಿಗಳು ಉಳಿದಿರತಕ್ಕ ಅರ್ಧ ಕೆಲಸಕ್ಕೆ ಹಣವನ್ನು ಕೊಟ್ಟು ಕೆಲಸ ಪೂರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಅಬ್ದುಲ್ ನಜೀರ್‌ಸಾಬ್ —ಮಾನ್ಯ ಅಧ್ಯಕ್ಷರೇ, 1984-85 ನೇ ಸಾಲಿನಲ್ಲಿ ಆದ್ರತೆಯ ನೇರೆಗೆ ನಾವು ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಆರ್ದ್ರತೆಯು ಇದೆ ಎಂದು ಅಭಿಪ್ರಾಯ ಪಟ್ಟರೆ ಆ ಕೆಲಸವನ್ನು ನಾವು ತೆಗೆದುಕೊಂಡು ಕೆಲಸ ಪ್ರಾರಂಭ ಮಾಡುತ್ತೇವೆ.

ಒಬ್ಬ ಸದಸ್ಯರು --ಸ್ವಾಮಿ ನನ್ನ ಹುಬ್ಳಿ ಧಾರವಾಡ ನಗರಗಳಲ್ಲಿ ಹಾಲಿನ ಸರಬರಾಜು ನಿಂತು ಹೋಗಿ ಸುಮಾರು 15 ದಿನಗಳಾಗಿದೆ. ಅಲ್ಲಿ ಜನರು ಹಾಲಿಗೆ ತುಂಬಾ ಕಷ್ಟ ಪಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು.-ಅವರು ಹಾಲಿನ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ ನೀರಿನ ಬಗ್ಗೆ ಅಲ್ಲ.

10-3 A. M.

ಶ್ರೀ ಎಸ್ ಆರ್ ಬೊಮ್ಮಾಯಿ.--ಮಾನ್ಯ ಅಧ್ಯಕ್ಷರೇ, ಸದಸ್ಯರು ಹೇಳಿದಂತೆ ಅಲ್ಲಿನ ಸರ್ಕಾರಿ ಹಾಲಿನ ಡೈರಿಯ ಉತ್ಪಾದನಾ ದರವನ್ನು ಈ ಮೊದಲು ಕಡಿಮೆ ಮಾಡಿದ್ದರು. ಆದರೆ ಈಗ ಪುನ: ಮೊದಲಿನ ದರವನ್ನೇ ಕೊಡಬೇಕೆಂದು ತಿಳಿಸಿದ್ದೇವೆ. ಅದರಂತೆ ಕೊಡುತ್ತಿದ್ದಾರೆ ಇನ್ನೊಂದು ವಿಚಾರ ಏನೆಂದರೆ ಕೆಲವು ಮಾರ್ಗಗಳನ್ನು ಬೆಳಗಾಂ ಡೈರಿಗೆ ವರ್ಗ ಮಾಡಿದ್ದರಿಂದ ಈ ಒಂದು ಸಮಸ್ಯೆ ಬಂದಿತ್ತು. ಈಗ ನುತ್ತೆ ಅಲ್ಲಿನ ಹಾಲಿನ ಡೈರಿಗೆ 18 ಸಾವಿರ ಗ್ಯಾಲನ್ ಹಾಲು ಬರುತ್ತಾ ಇದೆ. ಆದ್ದರಿಂದ ಈಗ ಅಲ್ಲಿ ಯಾವ ಸಮಸ್ಯೆಯೂ ಇಲ್ಲ.

ಅಧ್ಯಕ್ಷರು.--ಮಾನ್ಯ ಮಹದೇವ್ ಅವರು ಕೊಟ್ಟಿರುವ ನೋಟೀಸು ನಿಯಮ 334 ರಲ್ಲಿ ಬರುವುದಿಲ್ಲ. ಏಕೆಂದರೆ ಇದು 1982ನೇ ಇಸವಿಗೆ ಸಂಬಂಧಪಟ್ಟದೆ. ಆದ್ದರಿಂದ ಇದನ್ನು ಗಮನ ಸೆಳೆಯುವ ಸೂಚನೆ ಮೂಲಕ ಪ್ರಸ್ತಾಪ ಮಾಡಿದರೆ ಮಾನ್ಯ ಸದಸ್ಯರಿಗೆ ಸರ್ಕಾರದಿಂದ ಸರಿಯಾದ ಉತ್ತರ ಸಿಗುತ್ತದೆಂದು ಹೇಳುತ್ತೇನೆ

(iii) ಬಿನ್ನಿಪೇಟೆ ಕ್ಷೇತ್ರಕ್ಕೆ ನಾಗರೀಕ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

ಶ್ರೀ ಜಿ ನಾರಾಯಣ ಕುಮಾರ್.--ಮಾನ್ಯ ಅಧ್ಯಕ್ಷರೇ, ಬಿನ್ನಿಪೇಟೆ ಕ್ಷೇತ್ರದಿಂದ ಇಲ್ಲಿಯವರೆಗೆ ಎಂಟು ಜನ ಶಾಸಕರು ಆರಿಸಿ ಬಂದಿದ್ದಾರೆ. ಆದರೆ ಅಲ್ಲಿ ವಾಸಮಾಡುತ್ತಿರುವ ಜನರಿಗೆ ಯಾವ ನಾಗರೀಕ ಸೌಲಭ್ಯಗಳು ಸಿಗುತ್ತಿಲ್ಲ. ಈ ಪ್ರದೇಶವನ್ನು ಬೆಂಗಳೂರು ನಗರ ಸಭೆಗೆ ಸೇರಿಸಬೇಕೆಂದು ನಾನು ಮುಖ್ಯಮಂತ್ರಿಗಳಿಗೆ ಮತ್ತು ನಗರಾಭಿವೃದ್ಧಿ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೇನೆ ಆದರೂ ಅಲ್ಲಿನ ಜನರಿಗೆ ಯಾವ ನಾಗರೀಕ ಸೌಲಭ್ಯಗಳು ಸಿಕ್ಕಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.--ಮಾನ್ಯ ಅಧ್ಯಕ್ಷರೇ, ಇಂತಹ ಪ್ರದೇಶಗಳು ಬೆಂಗಳೂರಿನ ನಾನಾ ಭಾಗಗಳಲ್ಲಿ ಇವೆ ಅನೇಕ ಜನರು ರೆವಿನ್ಯೂ ಸೈಟುಗಳಲ್ಲಿ ಮನೆ ಕಟ್ಟಿಕೊಂಡಿದಾರೆ. ಇಂತಹ ಕಡೆಗಳಿಗೆಲ್ಲಾ ಪೌರಸೌಲಭ್ಯಗಳನ್ನು ಅಂದರೆ ರಸ್ತೆ, ದೀಪ, ಒಳಚರಂಡಿ, ಆಸ್ಪತ್ರೆ, ಪೊಲೀಸ್ ಸ್ಟೇಷನ್ ಮುಂತಾದ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಕೇಳುತ್ತಿದ್ದಾರೆ, ಈ ವಿಚಾರವನ್ನು ಬೆಂಗಳೂರು ಕಾರ್ಪೊರೇಷನ್ ನವರು ತೀರ್ಮಾನ ಮಾಡಬೇಕು. ಮಾನ್ಯ ಸದಸ್ಯರೂ ಕೂಡ ಅಲ್ಲಿನ ಎಕ್ಸ್-ಅಫಿಷಿಯೋ ಮೆಂಬರ್ ಆಗಿದಾರೆ. ಆದ್ದರಿಂದ ಅವರು ಈ ವಾದವನ್ನು ಅಲ್ಲಿ ಇಟ್ಟರೆ ಅನರಿಗೆ ಪರಿಹಾರ ಸಿಗುತ್ತದೆಂದು ನಾನು ಭಾವಿಸಿದ್ದೇನೆ. ನಾನು ಕೂಡ ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.--ಮಾನ್ಯ ಮಂತ್ರಿಗಳು ಹೇಳಿದ್ದು ಬೆಂಗಳೂರು ನಗರದ ದೂರ ದಲ್ಲಿರುವ ಹಳ್ಳಿಗಳಿಗೆ ಸಂಬಂಧಪಟ್ಟದ್ದು ಆದರೆ ನಾನು ಹೇಳಿದ್ದು ಬೆಂಗಳೂರು ನಗರದ ಮಧ್ಯೆ ಇರುವ ಬಿನ್ನಿಪೇಟೆ ವಿಚಾರವನ್ನು ಅಲ್ಲಿನ ಜನರು ಇಲ್ಲಿಯವರೆಗೆ 8 ಜನ ಶಾಸಕರನ್ನು ಆರಿಸಿ ಕಳಿಸಿದಾರೆ ಆದ್ದರಿಂದ ಅಲ್ಲಿನ ಜನರಿಗೆ ನಾಗರೀಕ ಸೌಲಭ್ಯಗಳನ್ನು ನೀಡುವ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು --ಕಾರ್ಪೊರೆಷನ್‌ನವರೇ ಈ ಬಗ್ಗೆ ತೀರ್ಮಾನ ಮಾಡಿ ಕಳುಹಿಸಲಿ ಎಂದು ಮಂತ್ರಿಗಳು ಹೇಳಿದ್ದಾರೆ

ಶ್ರೀ ಎಂ. ಎಸ್. ಕೃಷ್ಣನ್.--ಬೆಂಗಳೂರಿನ ಎಲ್ಲಾ ಶಾಸಕರಿಗಿಂತ ಇವರು ಬಹಳ ಪ್ರಭಾವಶಾಲಿ ಶಾಸಕರಾಗಿದಾರೆ. ಇವರೊಬ್ಬರೇ ತಪ್ಪದೇ ಬೆಂಗಳೂರು ಕಾರ್ಪೊರೇಷನ್ ಸಭೆಗೆ ಹಾಜರಾಗುತ್ತಿರುವುದು. ಇದರ ಜೊತೆಗೆ ಇವರು ಮುಖ್ಯಮಂತ್ರಿಗಳು ಹಾಗೂ ಇತರ ಮಂತ್ರಿಗಳನ್ನು ತಮ್ಮ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ಸುತ್ತಾಡಿಸಿದ್ದಾರೆ ಆದರೂ ಅವರ ಕ್ಷೇತ್ರದ ಕೆಲಸಗಳಾಗಿಲ್ಲ ಎಂದು ಹೇಳುತ್ತಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ

(iv) ರಾಯಚೂರು ಜಿಲ್ಲೆಯ ಶಿರವಾರ ಗ್ರಾಮದಲ್ಲಿ ಕಾರ್ ಅಪಘಾತದಲ್ಲಿ ಮೂರಜನ ದಲಿತರ ಸಾವು.

ಶ್ರೀ ವಿ. ಧನಂಜಯ ಕುಮಾರ್.--ಮಾನ್ಯ ಅಧ್ಯಕ್ಷರೇ, ತಾ|| 5-2-84 ರಂದು ಒಂದು ವಿಚಾರ ಪತ್ರಿಕೆಯಲ್ಲಿ ವರದಿಯಾಗಿದೆ ಏನೆಂದರೆ ತಾ|| 9-12-1983 ನೇ ದಿವಸ ರಾಯಚೂರು ಜಿಲ್ಲೆಯ ಶಿರವಾರ ಗ್ರಾಮದಲ್ಲಿ ಶಾಸಕರೊಬ್ಬರ ಮಗಳು ಅತಿ ವೇಗದಿಂದ ಕಾರನ್ನು ನಡೆಸಿದ್ದರಿಂದ ಅಲ್ಲಿನ ಬಸ್ ಸ್ಟಾಂಡಿನಲ್ಲಿ ಮಲಗಿದ್ದ 7 ಜನ ದಲಿತರ ಮೇಲೆ ಆ ಕಾರು ಹರಿದು ಮೂರು ಜನ ಸ್ಥಳದಲ್ಲಿಯೇ ಮೃತರಾಗಿದ್ದಾರೆ. ಈ ಚಾಲಕಿಗೆ ಕಾರನ್ನು ಬಿಡಲು ಲೈಸನ್ಸ್ ಕೂಡ ಇರಲಿಲ್ಲ ಈ ಕಾರಣದಿಂದ ಪೋಲೀಸರು ಬೇರೆ ವಾಹನದಲ್ಲಿ ಈ ಬಾಲಕಿಯನ್ನು ಗುಪ್ತವಾಗಿ ಕರೆದುಕೊಂಡು ಹೋಗಿದ್ದಾರೆ. ಈ ವಿಚಾರದಲ್ಲಿ ಒಂದು ಸುಳ್ಳು ಕೇಸನ್ನು ಹಾಕುವ ಪ್ರಯತ್ನ ನಡೆದಿದೆ. ಇದೇ ಕಾರಣದಿಂದ ಅಲ್ಲಿನ ದಲಿತರೆಲ್ಲರೂ ಸೇರಿ ಮೆರವಣಿಗೆ ನಡೆಸಿದ್ದಾರೆ ಮತ್ತು ತನಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಅಲ್ಲಿನ ಶಾಸಕರ ಒತ್ತಡದಿಂದ ಈ ಬಗ್ಗೆ ಸರಿಯಾಗಿ ತನಿಖೆ ನಡೆಯುತ್ತಿಲ್ಲ. ಆ ಕಾರಿನ ಚಾಲಕಿಯ ಮೇಲೆ ಕೇಸು ಇನ್ನೂ ದಾಖಲಾಗಿಲ್ಲ ಕ್ರಿಮಿನಲ್ ಕೇಸು ದಾಖಲಾದರೆ ಮಾತ್ರ ಈ ಅಪಘಾತದಲ್ಲಿ ಸಿಡಿದ ಮತ್ತು ಗಾಯಗೊಂಡ ಜನರಿಗೆ ವಿಮಾ ಪರಿಹಾರದ ಹಣ ಸಿಗುತ್ತದೆ. ಆದ್ದರಿಂದ ವಾಹನ ಅಪಘಾತ ಆಗಿದೆ ಎಂದು ಕೇಸು ದಾಖಲಾಗಬೇಕಾಗಿದೆ ಆದರೂ ಶಾಸಕರ ಪ್ರಭಾವದಿಂದ ಈ ಕೇಸು ದಾಖಲಾಗಿಲ್ಲ ಈ ಬಗ್ಗೆ ಸಿ. ಒ. ಡಿ. ಯಿಂದ ತನಿಖೆ ಮಾಡಿಸಬೇಕು ತಪ್ಪು ಯಾರೇ ಮಾಡಿರಲಿ ಶಾಸಕರ ಮಗಳು ಮಾಡಿರಲಿ ಮಂತ್ರಿಗಳ ಮಗಳು ಮಾಡಿರಲಿ ಅಥವಾ ಅಧಿಕಾರಿಗಳ ಮಗಳು ಮಾಡಿರಲಿ ಯಾರೇ ತಪ್ಪು ಮಾಡಿದರೂ ಸರಿಯಾದಂತಹ ವಿಚಾರಣೆ ಆಗಬೇಕೆಂದು ಹೇಳುತ್ತೇನೆ. ಮತ್ತು ಎಂ. ವಿ. ಆಕ್ಟ್ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.--ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅತಿ ವೇಗದಿಂದ ಹಾಗೂ ಅಚಾತುರ್ಯದಿಂದ ಕಾರನ್ನು ನಡೆಸಿ ಅಪಘಾತ ಉಂಟು ಮಾಡಿದ ಚಾಲಕಿಯ ಮೇಲೆ ಸರ್ಕಾರ ಇನ್ನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಶಾಸಕರೊಬ್ಬರ ಪ್ರಭಾವದಿಂದ ಈ ಬಗ್ಗೆ ಕೇಸ್ ಹಾಕಿಲ್ಲ ಎಂದು ಹೇಳಿದ್ದಾರೆ. ಇದನ್ನು ನಾನು ವಿಚಾರ ಮಾಡುತ್ತೇನೆ. ಇದು ಕ್ರಿಮಿನಲ್ ಕೇಸ್ ಆಗುವುದರಿಂದ ಎಂ. ವಿ. ಆಕ್ಟ್ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಆದಕ್ಕೂ ಇದಕ್ಕೂ ಸಂಬಂಧ